**ಇಂದು ದಿನಾಂಕ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಕೆ ವಕೀಲರು ಶ್ರೀ ಪಿ ಎಮ್ ಎನ್ ಎಸ್ ವಕೀಲರ ಪರವಾಗಿ ವಾದಿಯರ ಪರಃ**

1. ನನಗೆ ಕನ್ನಡ ಭಾಷೆ ಓದಲು ಬರೆಯಲು ಸ್ವಲ್ಪ ಮಟ್ಟಿಗೆ ಬರುತ್ತದೆ. ಮುಂಚಿನಿಂದಲೂ ದಾವಾ ಆಸ್ತಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ನಾನೇ ಮಾಡುತ್ತಿದ್ದೇನು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ್, ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ಅದರ ಸಾಗುವಳಿ ನನ್ನ ತಮ್ಮಂದಿರೂ ಮಾಡುತ್ತಾರೆ. ದಾವಾ ಸ್ವತ್ತು ನಾನು ಖರೀದಿಸಿದ್ದೇನೆ, ಅದು ನನ್ನ ಹೆಸರಿನಲ್ಲಿರುತ್ತದೆ. ಸದರಿ ಜಮೀನು ಯಾರಿಂದ ಯಾವ ಇಸವಿಯಲ್ಲಿ ಖರೀದಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು 1999 ರಲ್ಲಿ ನಂಜಮ್ಮನವರ ಮುಖ್ತ್ಯಾರುನಾಮರಾದ ಎನ್ ರಮೇಶ ಇವರಿಂದ ಕ್ರಯಕ್ಕೆ ಪಡೆದಿದ್ದೇನೆ ಎಂದರೆ ನಿಜ. ಸದರಿ ಕ್ರಯದ ಮೊಬಲಗು ಕುರಿತು ನನಗೆ ಹೇಳಲು ಬರುವುದಿಲ್ಲ. ಸದರಿ

2. ನಿ.ಪಿ.1 ರಂತೆ ಇರುವ ಕರಾರು ಪತ್ರದ ಮೇಲೆ ಸಹಿ ನನ್ನದೇ ಇರುತ್ತದೆ. ನಾನು ಯಾವುದೇ ಪತ್ರಕ್ಕೆ ಸಹಿ ಮಾಡುವ ಮೊದಲು ಅದನ್ನು ಓದಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ಕ್ಕೆ ನಾನು ಓದಿ ತಿಳಿದುಕೊಂಡಿಯೇ ಸಹಿ ಮಾಡ್ಡಿದೇನೆ ಎಂದರೆ ಸಾಕ್ಷಿದಾರರು ಖಾಲಿ ಇರುವ ಬಿಳಿ ಹಾಳೆಗೆ ಸಹಿ ಮಾಡಿರುತ್ತೇನೆ ಎನ್ನುತ್ತಾರೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**